# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ –144ರ ವಾರ್ಡ್ ಸಭೆಯ ನಡವಳಿ

ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಸಿದ್ಧಾಪುರ ವಾರ್ಡ್–144 ರಲ್ಲಿ ವಾರ್ಡ್ ಸಭೆಯನ್ನು ಮಾನ್ಯ ಶ್ರೀ. ನರಸಿಂಹರಾಮ್‌ರಾವ್, ಅಧೀಕ್ಷಕ ಅಭಿಯಂತರರು (ದಕ್ಷಿಣ), ನೋಡಲ್ ಅಧಿಕಾರಿ ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರ ಅಪ್ಪಣೆ ಮೇರೆಗೆ ದಿನಾಂಕ:07/07/2021 ರಂದು ಬುಧವಾರ ಮಧ್ಯಾಹ್ನ 3.00 ಗಂಟೆಗೆ ವಾರ್ಡ್ ಕಮಿಟಿ ಸಭೆಯನ್ನು ಕರೆಯಲಾಗಿದ್ದು, ವಾರ್ಡ್ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು Zoom Application Link ಮೂಲಕ ಸದಸ್ಯರಿಗೆ ಆಹ್ವಾನ ನೀಡಿದ್ದು, ಸಭೆಗೆ ಅಂತರ್ಜಾಲದ ಲಿಂಕ್ ಮುಖಾಂತರ ಹಾಜರಾಗಿರುವ ಎಲ್ಲರಿಗೂ ಸ್ವಾಗತ ಕೋರುತ್ತಾ, ಸಭೆಯ ವಾರ್ಡ್ ಸಮಿತಿ ಅಧ್ಯಕ್ಷರವರ ಅಧ್ಯಕ್ಷತೆಯೊಂದಿಗೆ ಸಭೆಯನ್ನು ನಡೆಸಲಾಯಿತು.

**ಹಾಜರಿದ್ದವರು:–**

1. ಅಧೀಕ್ಷಕ ಅಭಿಯಂತರರು (ದಕ್ಷಿಣ) ಹಾಗೂ ವಾರ್ಡ್ 144ರ ನೋಡಲ್ ಅಧಿಕಾರಿ.
2. ಸಹಾಯಕ ಅಭಿಯಂತರರು, ವಾರ್ಡ್–144.
3. ವೈದ್ಯಾಧಿಕಾರಿಗಳು, ಸಿದ್ದಾಪುರ.
4. ಸಹಾಯಕ ಅಭಿಯಂತರರು (ವಿದ್ಯುತ್–ದಕ್ಷಿಣ).
5. ಹಾಗೂ ಸಾರ್ವಜನಿಕರು.

*********

1. ಶ್ರೀ. ಮಂಜುನಾಥ್ ಟಿ. ರವರು ಮಾತನಾಡಿ ಸಿದ್ದಾಪುರ ಜಂಕ್ಷನ್ ಇಂದ ಅಶೋಕ ಪಿಲ್ಲರ್‌ವರೆಗೆ ರಸ್ತೆ ಮೀಡಿಯನ್ ಅವಶ್ಯಕತೆ ಇರುವುದಾಗಿ ಕೋರಿದರು. ಈ ವಿಷಯವಾಗಿ ಅಧ್ಯಕ್ಷರು ಉತ್ತರಿಸಿ ರಸ್ತೆ ಮತ್ತು ಮೂಲಭೂತ ಸೌಕರ್ಯ ವಿಭಾಗದವರು ಸಭೆಗೆ ಹಾಜರಿಲ್ಲದ ಕಾರಣ ಮುಂದಿನ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.

2. ಶ್ರೀ. ಮಂಜುನಾಥ್ ಟಿ. ರವರು ಮಾತನಾಡಿ 18 ವರ್ಷದ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ವಾರ್ಡ್ ವ್ಯಾಪ್ತಿಯಲ್ಲಿ ವ್ಯಾಕ್ಸಿನೇಷನ್ ದೊರೆಯುತ್ತಿಲ್ಲವೆಂದು ತಿಳಿಸಿದರು. ಈ ವಿಷಯವಾಗಿ ವೈದ್ಯಾಧಿಕಾರಿಗಳು ಮಾತನಾಡು 18 ವರ್ಷದ ಮೇಲ್ಪಟ್ಟ ವಿದ್ಯಾರ್ಥಿಗಳಿಗೆ ತಮ್ಮ ತಮ್ಮ ಕಾಲೇಜಿನಲ್ಲಿಯೇ ವ್ಯಾಕ್ಸಿನೇಷನ್ ನೀಡುತ್ತಿರುವುದಾಗಿ ಸಭೆಗೆ ತಿಳಿಸಿದರು.



Scanned with CamScanner

3. ಶ್ರೀ. ನಿಜಾಮುದ್ದೀನ್ ರವರು ಮಾತನಾಡಿ ಈಗಾಗಲೇ ಮೊದಲನೇ ವ್ಯಾಕ್ಸಿನೇಷನ್ ನೀಡಲಾದ 45 ವರ್ಷಗಳ ಮೇಲ್ಪಟ್ಟ ಸಾರ್ವಜನಿಕರಿಗೆ 2ನೇ ಹಂತದ ವ್ಯಾಕ್ಸಿನೇಷನ್ ಎಷ್ಟು ದಿನಗಳಲ್ಲಿ ನೀಡುತ್ತೀರಿ ಎಂದು ಪ್ರಶ್ನಿಸಿದರು. ಈ ವಿಷಯವಾಗಿ ವೈದ್ಯಾಧಿಕಾರಿಗಳು 84 ದಿನಗಳ ನಂತರ 2ನೇ ಹಂತದ ವ್ಯಾಕ್ಸಿನೇಷನ್ ನೀಡಲಾಗುವುದು ಎಂದು ಸಭೆಗೆ ತಿಳಿಸಿದರು.

4. ಶ್ರೀ. ನಿಜಾಮುದ್ದೀನ್ ರವರು ಮಾತನಾಡಿ ವಾರ್ಡ್ ಪ್ರದೇಶದಲ್ಲಿ ಸೊಳ್ಳೆಗಳ ಅತಿ ಹೆಚ್ಚಾಗಿದೆ ಎಂದು ಸಭೆಗೆ ತಿಳಿಸಿದರು. ಅಲ್ಲಿನ ಸಾರ್ವಜನಿಕರಾದ ಶ್ರೀ. ಅಶೋಕ್ ರವರು ಮಾತನಡಿ ವಾರ್ಡ್ ಪ್ರದೇಶದಲ್ಲಿ ಸೊಳ್ಳೆಗಳ ಕಾಟ ಇರುವುದಿಲ್ಲವೆಂದು ಮನವರಿಕೆ ಮಾಡಿದರು.

5. ಶ್ರೀ. ನಿಜಾಮುದ್ದೀನ್ ಮತ್ತು ಶ್ರೀ. ಅಜ್ಮಲ್ ರವರು ಮಾತನಾಡಿ ಹಿಂದಿನ ಸಭೆಗಳಲ್ಲಿ ಸಾಕಷ್ಟು ಬಾರಿ ಚರ್ಚಿಸಿದ ಸಿ.ಸಿ. ಕ್ಯಾಮರಾ ಅಳವಡಿಸುವ ಬಗ್ಗೆ ಮತ್ತೊಮ್ಮೆ ಈ ಸಭೆಯಲ್ಲಿಯೂ ಸಹ ಚರ್ಚಿಸಿದ ಹಿನ್ನೆಲೆಯಲ್ಲಿ ಸಹಾಯಕ ಅಭಿಯಂತರರು (ವಿದ್ಯುತ್–ದಕ್ಷಿಣ) ರವರು ಈ ಹಿಂದೆ ಈ ಕಾಮಗಾರಿಯ ಕಡತವು ಕಾಣೆಯಾಗಿತ್ತು. ಆದರೆ ಈಗ ಈ ಸದರಿ ಕಾಮಗಾರಿಯ ಕಡತವು ದೊರೆತಿರುವ ಹಿನ್ನೆಲೆಯಲ್ಲಿ ಕೆಲವೇ ದಿನಗಳಲ್ಲಿ ಟೆಂಡರ್‌ನ್ನು ಕರೆದು ಕಾಮಗಾರಿಯನ್ನು ಪ್ರಾರಂಭಿಸುವುದಾಗಿ ಸಭೆಗೆ ತಿಳಿಸಿದರು.

6. ಶ್ರೀ. ರಿಯಾಜ್ ರವರು ಮಾತನಾಡಿ ನಿಮ್ಹಾನ್ಸ್ ಕಾಂಪೌಂಡ್‌ನಲ್ಲಿ ಹಾಕಿರುವ ಹಸಿ ತ್ಯಾಜ್ಯದ ಕಸದಿಂದ ಸುತ್ತ ಮುತ್ತ ವಾಸಿಸುವ ಸಾರ್ವಜನಿಕರಿಗೆ ದುರ್ವಾಸನೆ ಬರುತ್ತಿದ್ದು, ಆರೋಗ್ಯದ ಮೇಲೆ ತೊಂದರೆಯಾಗಿದೆ ಎಂದು ಇದರ ಬಗ್ಗೆ ಕ್ರಮ ತೆಗೆದುಕೊಳ್ಳಲು ಮಾನ್ಯ ಅಧ್ಯಕ್ಷರಿಗೆ ಕೋರಿರುವ ಹಿನ್ನೆಲೆಯಲ್ಲಿ ಸದರಿಯವರಿಗೆ ನೋಟಿಸ್ ಜಾರಿ ಮಾಡಿ ಹಸಿ ತ್ಯಾಜ್ಯವನ್ನು ತೆರವುಗೊಳಿಸಲು ಕ್ರಮ ವಹಿಸುವಂತೆ ಸಂಬಂಧಪಟ್ಟ ಇಲಾಖೆಯವರಿಗೆ ನಿರ್ದೇಶನ ನೀಡುವುದಾಗಿ ಸಭೆಯಲ್ಲಿ ತಿಳಿಸಿದರು.

7. ಶ್ರೀ. ತೇಜಸ್‌ಗೌಡ ರವರು ಮಾತನಾಡಿ ವಾರ್ಡ್ ಪ್ರದೇಶದಲ್ಲಿ ಸಾಕಷ್ಟು ಬೀದಿ ನಾಯಿಗಳಿದ್ದು, ಈ ಬೀದಿ ನಾಯಿಗಳಿಗೆ ರ‍್ಯಾಬಿಸ್ ಇಂಜೆಕ್ಷನ್ ನೀಡಿಲ್ಲವೆಂದು ಆಕ್ಷೇಪಿಸಿದರು. ಈ ವಿಷಯವಾಗಿ ಪಶು ಸಂಗೋಪನಾ ಇಲಾಖೆಯ ವೈದ್ಯರಾದ ಶ್ರೀ. ಶಿವಕುಮಾರ್ ರವರನ್ನು ದೂರವಾಣಿ ಮೂಲಕ ಸಂಪರ್ಕಿಸಲಾಯಿತು ಇದಕ್ಕೆ ಪ್ರತ್ಯುತ್ತರವಾಗಿ ವೈದ್ಯರು ಈಗಾಗಲೇ ಕೆಲವು ಬೀದಿ ನಾಯಿಗಳಿಗೆ ರ‍್ಯಾಬಿಸ್ ಚುಚ್ಚುಮದ್ದನ್ನು ಹಾಕಲಾಗಿದ್ದು, ಉಳಿದ ಬೀದಿ ನಾಯಿಗಳಿಗೆ ರ‍್ಯಾಬಿಸ್ ಚುಚ್ಚುಮದ್ದನ್ನು ಹಾಕಲಾಗುವುದು ಎಂದು ತಿಳಿಸಿದರು.

8. ಶ್ರೀ. ತೇಜಸ್‌ಗೌಡ ರವರು ಮಾತನಾಡಿ ತಾವು ಹಿಂದಿನ ಸಭೆಯಲ್ಲಿ ಅರೆಕೆಂಪನಹಳ್ಳಿ ವಸತಿ ಪ್ರದೇಶದಲ್ಲಿರುವ ಬೋರ್‌ವೆಲ್ ಹಾಳಾಗಿದ್ದು, ಸರಿಪಡಿಸಿಕೊಡುವಂತೆ ಕೋರಿದ್ದು, ಸದರಿ ಬೋರ್‌ವೆಲ್ ಸರಿಪಡಿಸಿ ಸಾರ್ವಜನಿಕರ ಅನುಕೂಲಕ್ಕೆ ನೀಡಿರುವ ಹಿನ್ನೆಲೆಯಲ್ಲಿ ವಾರ್ಡಿನ ಅಭಿಯಂತರರಿಗೆ ಅಭಿನಂದನೆ ತಿಳಿಸಿದರು.



Scanned with CamScanner

9. ಶ್ರೀ. ಅಶೋಕ್ ರವರು ಮಾತನಾಡಿ ವಾರ್ಡ್ ಪ್ರದೇಶದಲ್ಲಿ ಸಾಕಷ್ಟು ಬೀದಿ ದೀಪಗಳು ಹಾಳಾಗಿದ್ದು, ಸರಿಪಡಿಸಲು ಕೋರಿದರು ಈ ವಿಷಯವಾಗಿ ಅಧ್ಯಕ್ಷರು ಸಂಬಂಧಪಟ್ಟ ಇಲಾಖೆಯಾದ ವಿದ್ಯುತ್–ದಕ್ಷಿಣ ರವರಿಗೆ ದೂರವಾಣಿ ಮುಖಾಂತರ ಮಾತನಾಡಿ ಈ ಬಗ್ಗೆ ಕೂಡಲೇ ಕ್ರಮ ವಹಿಸಲು ತಿಳಿಸಿದರು.

10. ಶ್ರೀ. ಅಶೋಕ್ ರವರು ಮಾತನಾಡಿ ಮಹಾಬೋದಿಗೆ ಗುತ್ತಿಗೆಗೆ ನೀಡಿರುವ (ಮಲ್ಲಿಗೆ ಆಸ್ಪತ್ರೆ) ಕಟ್ಟಡದಲ್ಲಿ ಯಾವ ಉದ್ದೇಶಕ್ಕೆ ಗುತ್ತಿಗೆ ನೀಡಲಾಗಿದೆಯೋ ಅದರ ವ್ಯತಿರಿಕ್ತವಾಗಿ ಕಟ್ಟಡ ಬಳಕೆಯಾಗುತ್ತಿದೆ ಎಂದು ಪ್ರಶ್ನಿಸಿದ್ದರು. ಈ ವಿಷಯವಾಗಿ ಮಹಾಬೋದಿ ಅಧ್ಯಕ್ಷರಿಗೆ ನೋಟಿಸ್ ಜಾರಿ ಮಾಡುವಂತೆ ಕಂದಾಯ ಅಧಿಕಾರಿಯವರಿಗೆ ಅಧ್ಯಕ್ಷರು ತಿಳಿಸಿದರು.

11. ವಾರ್ಡಿನ ಸಾರ್ವಜನಿಕರು ಮಾತನಾಡಿ ವಾರ್ಡ್ ಪ್ರದೇಶದ ರಸ್ತೆಗಳಲ್ಲಿ ದಿನನಿತ್ಯದ ವ್ಯಾಪಾರಕ್ಕಾಗಿ ಪಾದಚಾರಿ ಮಾರ್ಗವನ್ನು ಬಳಸುತ್ತಿದ್ದು, ವಾಹನಗಳ ಸಂಚಾರಕ್ಕೆ ತೊಂದರೆಯಾಗಿದೆ ಎಂದು ತಿಳಿಸಿದರು. ಅಧ್ಯಕ್ಷರು ಮಾತನಾಡಿ ವಾರ್ಡ್ ಪ್ರದೇಶದಲ್ಲಿ ಈ ರೀತಿ ಪಾದಚಾರಿ ಮಾರ್ಗವನ್ನು ಬಳಸುತ್ತಿರುವ ರಸ್ತೆಗಳ ವಿವರಗಳನ್ನು ಕಲೆಹಾಕಿ ನೀಡುವಂತೆ ವಾರ್ಡಿನ ಅಭಿಯಂತರರಿಗೆ ಸೂಚಿಸಿದರು. ಈ ವಿಷಯಕ್ಕೆ ಶ್ರೀ. ಮಂಜುನಾಥ್ ರವರು ಆಕ್ಷೇಪಿಸಿ ಬಡ ಜನರು ದಿನನಿತ್ಯದ ವ್ಯಾಪಾರಕ್ಕಾಗಿ ರಸ್ತೆ ಬದಿಯಲ್ಲಿ ತಳ್ಳುವಗಾಡಿ ಇಟ್ಟುಕೊಂಡು ವ್ಯಾಪಾರ ಮಾಡಿದ ನಂತರ ತೆರವುಗೊಳಿಸುತ್ತಿರುತ್ತಾರೆಂದು ಸಭೆಯಲ್ಲಿ ಮನವರಿಕೆ ಮಾಡಿದರು.

12. ಶ್ರೀ. ಸುರೇಶ್ ಹೆಚ್.ಕೆ. ರವರು ಮಾತನಾಡಿ ವಾರ್ಡ್ ಪ್ರದೇಶದಲ್ಲಿ ಇರುವ ಸರ್ಕಾರಿ ಕಟ್ಟಡಗಳಲ್ಲಿಯೇ ವ್ಯಾಕ್ಸಿನೇಷನ್ ನೀಡಲು ಮತ್ತೊಮ್ಮೆ ಕೋರಿದರು. ಈ ವಿಷಯವನ್ನು ಗಂಬೀರವೆಂದು ಪರಿಗಣಿಸಲು ಅಧ್ಯಕ್ಷರು ವೈದ್ಯಾಧಿಕಾರಿಯವರಿಗೆ ಸೂಚನೆ ನೀಡಿದರು.

ಮೇಲಿನ ಈ ಎಲ್ಲಾ ಚಟುವಟಿಕೆಗಳನ್ನು ಕ್ರಮಬದ್ಧವಾಗಿ ನಿರ್ವಹಿಸಲು ಎಲ್ಲಾ ಸಿಬ್ಬಂಧಿ ವರ್ಗದವರು ಒಂದುಗೂಡಿ ಈ ಕಾರ್ಯದಲ್ಲಿ ಪಾಲ್ಗೊಂಡು ಮಾನ್ಯ ಆಯುಕ್ತರು (ಬಿಬಿಎಂಪಿ) ರವರು ವಹಿಸಿರುವ ಜವಾಬ್ಧಾರಿಯನ್ನು ಯಶಸ್ವಿಯಾಗಿ ನಿರ್ವಹಿಸಲು ಎಲ್ಲರೂ ಸಹಕರಿಸಬೇಕೆಂದು ಹೇಳುತ್ತಾ ಸಭೆ ಮುಕ್ತಾಯಗೊಳಿಸಿದರು.

(signature) 7/7/21
ಕಾರ್ಯದರ್ಶಿ & ಸಹಾಯಕ ಅಭಿಯಂತರರು
ವಾರ್ಡ್ ಸಂಖ್ಯೆ – 144
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

(signature) 7/7
ಅಧ್ಯಕ್ಷರು & ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ – 144
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ



Scanned with CamScanner